**ಒ.ಎಸ್.ನಂಬ್ರಃ 316/2017 ಪಿ .ಡಬ್ಲ್ಯೂ ಃ 1**

ದಿನಾಂಕಃ 05-02-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು

**ಪಾಟಿ ಸವಾಲುಃ ಶ್ರೀ. ಎಂ.ಜೆ.ಎಸ್ ವಕೀಲರಿಂದ**

ನಾನು ಸುಮಾರು 30 ವರ್ಷಗಳಿಂದ ಕುಂಮ್ಟಾ ತಾಲೂಕಿನ ವಾಸಿ. ನಾನು ಹೆಂಡತಿ ಮತ್ತು ಮಕ್ಕಳೊಂದಿಗೆ ಅಲ್ಲಿ ವಾಸವಿದ್ದೇನೆ . ನಾನು ಕಟ್ಟಡ ನಿರ್ಮಾಣ ಗುತ್ತಿಗೆದಾರ . ವಾದಿ ಕಮ್ಮಾರ ನ ಕೆಲಸ ಮಾಡುತ್ತಾರೆ . ದಾವಾ ಸ್ವತ್ತಿನ ಸರ್ವೇ ನಂ. 294 ರ 1 ಎಕ್ರೆ . ದಾವಾ ಸ್ವತ್ತಿನ ಪಹಣಿಯನ್ನು ನಾನು ಅಥವಾ ವಾದಿ ಮೊದಲಿಗೆ ನೋಡಲಿಲ್ಲ . ಅದರ ಪಹಣಿ ಮೊದಲಿಗೆ ಗೌರಿ ಆಚಾರ್ತಿ ಅಥವಾ ಕಾಳಿಂಗ ಆಚಾರಿ ಅಥವಾ ಭಾಸ್ಕರ್ ಹೆಗ್ಡೆ ರವರ ಹೆಸರಿನಲ್ಲಿ ಎಂದಿಗೂ ದಾಖಲಾಗಿರಲಿಲ್ಲ . 2016 ರಲ್ಲಿ ದಾವಾ ಸ್ವತ್ತಿನ ಪಹಣಿ ಪ್ರತಿವಾದಿಗಳ ಹೆಸರಿನಲ್ಲಿ ಇದ್ದಿದ್ದು ಕಂಡುಬರುತ್ತಿತ್ತು. ಈಗ ಶಾರಾದ ಆಚಾರ್ತಿ ಹೆಸರಿನಲ್ಲಿ ಕಂಡುಬರುತ್ತದೆ . ಅದಕ್ಕೂ ಮೊದಲು ಪಣಿ ಆಚಾರ್ತಿ ಮತ್ತು ಪದ್ದು ಆಚಾರ್ತಿ ರವರ ಹೆಸರಿನಲ್ಲಿತ್ತು . ಸಾಕ್ಷಿಯು ಸದರಿ 1996-97 ರಿಂದ 2000-01 ರವರಗಿನ ಪಹಣಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ಈ ಜಿಲ್ಲೆಯಲ್ಲಿ ಪಹಣಿ ದಾಖಲೆ ಆರಂಭವಾದದ್ದು 1967-68 ರಲ್ಲಿ ಎಂದರೆ ಸರಿ. ಅಂದಿನಿಂದ ಪ್ರತಿವಾದಿಯರ ಹೆಸರಿಗೆ ಪಹಣಿ ಬದಲಾವಣೆ ಆಗುವ ವರೆಗೂ ಮೇಲೆ ಹೇಳಿದ ಪಣಿ ಮತ್ತು ಪದ್ದು ಆಚಾರ್ತಿ ರವರ ಹೆಸರಿನಲ್ಲಿ ಕಂಡು ಬರುತ್ತಿತ್ತು ಎಂದರೆ ಸರಿ. ಪಣಿ ಆಚಾರ್ತಿ ಮತ್ತು ಪದ್ದು ಆಚಾರ್ತಿ ಸರ್ವೇ ನಂ 294/2 ರ 1 ಎಕ್ರೆ ಗೆ ಮೂಲಿ ಹಕ್ಕನ್ನು ಹೊಂದಿದ್ದರು ಎಂದರೆ ನನಗೆ ಗೊತ್ತಿಲ್ಲ . ಸದರಿ ಸಹೋದರಿಯರು ಹಿರಿಯರಿಂದ ವಾರಸು ಮೇರೆಗೆ ಮೂಲಿ ಹಕ್ಕನ್ನು ಹೊಂದಿದ್ದರು ಎಂದರೆ ನನಗೆ ಗೊತ್ತಿಲ್ಲ . ಅವರ ಜೀವಿತಾವದಿಯಲ್ಲಿ 50 ಸೆಂಟ್ಸ್ ಅನುಭವದಲ್ಲಿದ್ದರು ಎಂದರೆ ಸರಿ . ಪದ್ದು ಆಚಾರ್ತಿ ನಿಸಂತತಿಯಲ್ಲಿ ಪವತಿಯಾಗಿದ್ದು ಆಕೆಯ ವಾರಸುದಾರರು ಪಣಿ ಆಚಾರ್ತಿ ಎಂದರೆ ಸರಿ. ಆನಂತರ ಸಂಪೂರ್ಣ ಹಕ್ಕಿಗೆ ಪಣಿ ಆಚಾರ್ತಿ ರವರು ವಾರಸುದಾರರಾಗಿರುತ್ತಾರೆ ಎಂದರೆ ಸರಿ. ಪಣಿ ಆಚಾರ್ತಿಯ ವಾರಸುದಾರ ಮಂಜುನಾಥ್ ಆಚಾರಿ ಒಬ್ಬರೇ ಮಗ ಎಂದರೆ ನನಗೆ ಗೊತ್ತಿಲ್ಲ . ವಾರಸು ಮೇರೆಗೆ 1 ಎಕ್ರೆ ಮಂಜುನಾಥ್ ಆಚಾರಿ ರವರ ಹೆಸರಿಗೆ ಬಂದಿದ್ದರೂ 44 ಸೆಂಟ್ಸ್ ಆತನ ಅನುಭವದಲ್ಲಿದೆ.

ಮಂಜುನಾಥ್ ಆಚಾರಿ ವಾರಸುದಾರರು ಎಂದರೆ ಈ ದಾವೆಯ ಪ್ರತಿವಾದಿಗಳು. ಮಂಜುನಾಥ್ ಆಚಾರಿ ರವರು ಬಿಟ್ಟು ಹೋಗಿರುವ ಸ್ವತ್ತಿನ ವಾರುಸುದಾರರು ಪ್ರತಿವಾದಿಗಳು ಎಂದರೆ ಸರಿ. ಪಣಿ ಆಚಾರ್ತಿ ರವರು ಜೀವಿತಾವದಿಯಲ್ಲಿ ಬಿಟ್ಟು ಹೋದ ಆಸ್ತಿಗಳಿಗೆ ಮಂಜುನಾಥ್ ಆಚಾರಿ ಒಬ್ಬರೇ ವಾರಸುದಾರರು ಎಂದರೆ ನನಗೆ ಗೊತ್ತಿಲ್ಲ . ಅದರ ಬಗ್ಗೆ ವಿಚಾರ ವಾದಿಗೆ ತಿಳಿದಿದೆ . ಇದರ ಬಗ್ಗೆ ವಾದಿಯನ್ನು ನಾನು ವಿಚಾರಿಸಿಲ್ಲ . ಪಣಿ ಆಚಾರ್ತಿ ಮತ್ತು ಪದ್ದು ಆಚಾರ್ತಿ ರವರ ಬಗ್ಗೆ

ನನಗೆ ವಾದಿ ತಿಳಿಸಿಲ್ಲ . ಪಣಿ ಆಚಾರ್ತಿ ಮತ್ತು ಪದ್ದು ಆಚಾರ್ತಿ ರವರ ಹೆಸರಿನಲ್ಲಿ ದಾವಾ ಸ್ವತ್ತಿನ ಸಂಬಂಧ ದಾಖಲಾದ ಪಹಣಿಯನ್ನು ಪ್ರಶ್ನಿಸಿಲ್ಲ . ನನ್ನ ಪ್ರಕಾರ ಪಣಿ ಆಚಾರ್ತಿ ಮತ್ತು ಪದ್ದು ಆಚಾರ್ತಿ ಅವರ ವಾರಸುದಾರನಾದ ಮಂಜುನಾಥ್ ಆಚಾರಿ ರವರ ಹೆಸರಿಗೆ ಬಂದ 1 ಎಕ್ರೆ ಸ್ಥಳ ಮತ್ತು ದಾವಾ ಸ್ವತ್ತು 2 ಬೇರೆ ಆಸ್ತಿಗಳಾಗಿರುತ್ತದೆ . ನಿಡಿ 1 ರಲ್ಲಿ ಕಂಡುಬರುವ ಆಸ್ತಿಯ ಮೇಲೆ ಹಕ್ಕು ಇದೆಯಾ ಎಂದರೆ ಸಾಕ್ಷಿಯು ಅದರ ಬಗ್ಗೆ ವಿಚಾರ ಮಾಡಬೇಕು ಎಂದು ಉತ್ತರಿಸಿರುತ್ತಾರೆ. ಮುಂದುವರಿದು ಭಾಸ್ಕರ ಹೆಗ್ಡೆ ರವರು ವಾದಿಗೆ ಮಾರಾಟ ಮಾಡಿರುವ ಸ್ವತ್ತಿನಲ್ಲಿ ಹಕ್ಕು ಕೇಳುವುದು ಎಂದು ಉತ್ತರಿಸಿರುತ್ತಾರೆ . ಸದರಿ ಸ್ವತ್ತು ನಿಡಿ 1 ರಲ್ಲಿ ಒಳಗೊಂಡಿದೆಯೇ ಎಂದು ನನಗೆ ಹೇಳಲು ಆಗುವುದಿಲ್ಲ . ನಿಡಿ 1 ರಲ್ಲಿ ಕಂಡುಬರುವ ಆಸ್ತಿ ಒಟ್ಟಾಗಿ ಇದೆ ಎಂದರೆ ಸರಿ. ಅದರ ಸುತ್ತಾ ಮಣ್ಣಿನ ದರೆ ಮತ್ತು ಬೇಲಿ ಇದೆ ಎಂದರೆ ಸರಿಯಲ್ಲ . ಸಾಕ್ಷಿಯು 22 ಸೆಂಟ್ಸ್ ವಾದಿಯ ಹೆಸರಿನಲ್ಲೂ , 22 ಸೆಂಟ್ಸ್ ರಾಮಾಚಾರಿ , 12 ಸೆಂಟ್ಸ್ ರಘು ಆಚಾರಿ ಮತ್ತು 44 ಸೆಂಟ್ಸ್ ಮಂಜುನಾಥ್ ಆಚಾರಿ ರವರ ಸ್ವಾಧೀನದಲ್ಲಿದ್ದು ಪ್ರತ್ಯೇಕ ಮಣ್ಣಿನ ಧರೆ ಇದೆ ಎಂದು ಉತ್ತರಿಸಿರುತ್ತಾರೆ .

ಸರ್ವೇ ನಂ . 294/2 ರ ಒಟ್ಟು ವಿಸ್ತೀರ್ಣ ಎಷ್ಟು ಎಂದು ನನಗೆ ತಿಳಿದಿಲ್ಲ . ಭಾಸ್ಕರ ಹೆಗ್ಡೆ ರವರು ಕಾಳಿಂಗ ಆಚಾರಿರವರಿಂದ ದಾವಾ ಸ್ವತ್ತನ್ನು ಖರೀದಿಸಿರುತ್ತಾರೆ . ಕಾಳಿಂಗ ಆಚಾರಿ ರವರಿಗೆ ದರ್ಖಾಸಿ ನಲ್ಲಿ ಮಂಜುರಾತಿಯಾಗಿರುತ್ತದೆ . ಸದರಿ ವಿಚಾರ ಭಾಸ್ಕರ ಹೆಗ್ಡೆ ರವರು ತಿಳಿಸಿರುತ್ತಾರೆ ದಾಖಲೆಯನ್ನು ನೋಡಿರುವುದಿಲ್ಲ . ಅದು ದರ್ಖಾಸಿ ನಲ್ಲಿ ಮಂಜುರಾತಿ ಆಗಿದ್ದರೆ ಗೌರಿ ಆಚಾರ್ತಿ ಹೆಸರಿನ ಸಾಗುವಳಿ ಚೀಟಿ, ಭೂ ಮಂಜೂರಾತಿ ಆದೇಶ ದಾಖಲೆಗಳು ಇಲಾಖೆಯಲ್ಲಿ ಸಿಗುತ್ತದೆ ಎಂದರೆ ಸರಿ. ಗೌರಿ ಆಚಾರ್ತಿರವರ ಹೆಸರಿಗೆ ಆಗಿರುವ ದರ್ಖಾಸಿನ ಆದೇಶದ ದಾಖಲೆಗಳನ್ನು ಭಾಸ್ಕರ ಹೆಗ್ಡೆ ರವರು ವಾದಿಗೆ ನೀಡಿಲ್ಲ . ಈವರೆಗೂ ಗೌರಿ ಆಚಾರ್ತಿ ರವರಿಗೆ ಸರ್ವೇ ನಂ 294/2 ರಲ್ಲಿ ದರ್ಖಾಸು ಆದೇಶ ಆಗಿರುವ ಬಗ್ಗೆ ನಾನು ಅಥವಾ ವಾದಿ ನೋಡಿಲ್ಲ . ಅದರ ಬಗ್ಗೆ ಯಾವುದೇ ದಾಖಲೆಯನ್ನು ಪಡೆಯುವ ಪ್ರಯತ್ನ ಮಾಡಿಲ್ಲ . ಭಾಸ್ಕರ ಹೆಗ್ಡೆ ರವರು ನೀಡಿದ ಮಾಹಿತಿ ಮತ್ತು ಮಾಡಿಕೊಟ್ಟ ಕ್ರಯಪತ್ರವನ್ನು ಹೊರುತುಪಡಿಸಿ ಬೇರೆ ಯಾವುದೇ ಮಾಹಿತಿ ನಮಗೆ ನೀಡಿಲ್ಲ . ನಿಪಿ 2 ಆಗುವ ಕಾಲಕ್ಕೆ ಸ್ವತ್ತಿನಲ್ಲಿ ಪದ್ದು ಆಚಾರ್ತಿ ರವರ ಮಗ ಮಂಜುನಾಥ್ ಆಚಾರಿ ರವರ ಮನೆ ಇತ್ತು ಅದನ್ನು ಬಿಟ್ಟು ಬೇರೆ ಖಾಲಿ ಸ್ಥಳವಾಗಿರುತ್ತದೆ . ಭಾಸ್ಕರ ಹೆಗ್ಡೆ ರವರಿಗೆ ಕ್ರಯ ಪತ್ರ ಆಗುವ ಕಾಲಕ್ಕೆ 1 ಎಕ್ರೆ ಜಾಗ ಒಂದೇ ಬ್ಲಾಕ್ ನಲ್ಲಿ ಇರಲಿಲ್ಲ. ನಿಪಿ 2 ಅಗುವ ಎಷ್ಟು ಕಾಲದ ಮೊದಲಿನಿಂದ ಮಂಜುನಾಥ್ ಆಚಾರಿ ರವರ ಮನೆ ಸದ ರಿ ಸ್ಥಳದಲ್ಲಿ ಇತ್ತು ಎಂದು ಹೇಳಲು ಆಗುವುದಿಲ್ಲ . ಸದರಿ ಮನೆ ಮಂಜುನಾಥ್ ಆಚಾರಿ ರವರ ತಾಯಿ ಪಣಿ ಆಚಾರ್ತಿ ವಾಸ ಇದ್ದ ಮನೆ ಎಂದರೆ ನನಗೆ ಗೊತ್ತಿಲ್ಲ . ಮಂಜುನಾಥ್ ಆಚಾರಿ ಪವತಿಯಾದ ನಂತರ 2 ನೇ ಪ್ರತಿವಾದಿ ಮತ್ತು ಆಕೆಯ ಮಕ್ಕಳು ವಾಸವಿದ್ದಾರೆ . ನಿಪಿ 2 ಅಗುವ ಕಾಲಕ್ಕೆ ಭಾಸ್ಕರ ಹೆಗ್ಡೆ ರವರು ಪ್ರಭಾವಿ ಮತ್ತು ಬಲಿಷ್ಟ ವ್ಯಕ್ತಿ ಎಂದರೆ ಸರಿ. ನಿಪಿ 2 ಆಗುವ ಕಾಲಕ್ಕೆ ಗೌರಿ ಆಚಾರ್ತಿ ಅಥವಾ ಕಾಳಿಂಗ ಆಚಾರಿ ರವರಿಗೆ ಸೇರಿದ್ದು ಎಂದು

ತೋರಿಸಲು ಯಾವುದೇ ಕಂದಾಯ ದಾಖಲೆಗಳು ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ . ನಿಪಿ 2 ಆಗುವ ಕಾಲಕ್ಕೆ ಪಹಣಿ ದಾಖಲೆಗಳು ಪದ್ದು ಮತ್ತು ಪಣಿ ಆಚಾರ್ತಿ ರವರ ಹೆಸರಿನಲ್ಲಿತ್ತು ಎಂದರೆ ಸರಿ. ಅವರ ಹೆಸರಿನಲ್ಲಿ ಸ್ವತ್ತಿನ ಹಕ್ಕುದಾರರಾಗಿ ಕಂಡುಬರುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ . ಗೌರಿ ಆಚಾರ್ತಿ ಮತ್ತು ಕಾಳಿಂಗ ಆಚಾರಿ ರವರಿಗೆ ನಿಪಿ 2 ರಲ್ಲಿ ಒಳಗೊಂಡ ಸ್ವತ್ತಿ ನ ಮೇಲೆ ಹಕ್ಕು ಅಧಿಕಾರ ಇಲ್ಲದ ವಿಚಾರ ತಿಳಿದಿದ್ದರೂ ಭಾಸ್ಕರ ಹೆಗ್ಡೆ ರವರು ಸದರಿ ದಾಖಲೆಯನ್ನು ಮಾಡಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ . ನಿಪಿ 2 ರ ಸ್ವತ್ತಿಗೆ ಗಡಿ ಗುರುತುಗಳನ್ನು ನಮೂದಿಸಿಲ್ಲ ಎಂದರೆ ನಾನು ನೋಡಿಲ್ಲ . ನಿಪಿ 2 ರ ಆದಾರದ ಮೇಲೆ ಭಾಸ್ಕರ ಹೆಗ್ಡೆ ರವರ ಹೆಸರಿಗೆ ಪಹಣಿ ವರ್ಗಾವಣೆ ಆಗಿತ್ತಾ ಎಂದು ನನಗೆ ತಿಳಿದಿಲ್ಲ . ನಿಪಿ 2 ಜಾರಿಗೆ ಬರಲಿಲ್ಲ ಎಂದರೆ ನನಗೆ ಗೊತ್ತಿಲ್ಲ . ನಿಪಿ 2 ದುರುದ್ದೇಶದಿಂದ ಸೃಷ್ಟಿಸಿದ ಮೋಸದ ದಾಖಲೆ ಎಂದರೆ ಸರಿಯಲ್ಲ . ಗೌರಿ ಆಚಾರ್ತಿ ಮತ್ತು ಕಾಳಿಂಗ ಆಚಾರಿ ಯಾರು ಎಂದು ನನಗೆ ತಿಳಿದಿಲ್ಲ . ಅವರು ಅಸ್ತಿತ್ವದಲ್ಲಿಲ್ಲದ ಕಾಲ್ಪನಿಕ ವ್ಯಕ್ತಿಗಳು ಎಂದರೆ ನನಗೆ ಗೊತ್ತಿಲ್ಲ . ನಿಪಿ 2 ದುರುದ್ದೇಶದಿಂದ ಸೃಷ್ಟಿಸಿದ ಮೋಸದ ದಾಖಲೆ ಎಂದು ಗೊತ್ತಿದ್ದರೂ ಅದರ ಆದಾರದ ಮೇಲೆ ಈ ಸುಳ್ಳು ದಾವೆ ದಾಖಲಿಸಿದ್ದು ಎಂದರೆ ಸರಿಯಲ್ಲ .

**ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ಕಲ್ಪಿಸಲಾಯಿತು.**

ಓ.ಹೇ.ಕೇ.ಸ.ಇದೆ

ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಕುಂದಾಪುರ .**